**ಓ ಎಸ್ ನಂಃ 176/2017**
**ಪಿ.ಡಬ್ಲ್ಯೂ -3**
**ದಿನಾಂಕಃ 03.02.2026**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಇ ಪಿ ವಕೀಲರಿಂದಃ**

ನನಗೆ ಗಿರಿಯಪ್ಪ ಗೊತ್ತಿಲ್ಲ. ದಾವಾ ಸ್ವತ್ತಿ ಮೂಲತಃ ದೊಡ್ಡಜ್ಜಿದು ಎಂದರೆ ಸರಿಯಲ್ಲ . ಸಾಕ್ಷಿಯು ನರಸಿಂಹಯ್ಯನವರಿಗೆ ಸೇರಿರುತ್ತದೆ ಎಂದು ನುಡಿದಿರುತ್ತಾರೆ . ನರಸಿಂಹಯ್ಯನವರಿಗೆ ದಾವಾ ಸ್ವತ್ತು ಹೇಗೆ ಬಂದಿರುತ್ತದೆ ಎಂದರೆ ಅದು ಅವರ ಅಜ್ಜನಿಂದ ಬಂದಿರುತ್ತದೆ ಎಂದು ನುಡಿದಿರುತ್ತಾರೆ . ನರಸಿಂಹಯ್ಯನವರಿಂದ ದಾವಾ ಸ್ವತ್ತು ಗುತ್ತಮ್ಮನಿಗೆ ಬಂದಿರುತ್ತದೆ. ಸುಮಾರು 40 ರಿಂದ 50 ವರ್ಷಗಳ ಹಿಂದೆ ಗುತ್ತಮ್ಮನಿಗೆ ಬಂದಿರುತ್ತದೆ. ಸುಮಾರು 30 ರಿಂದ 35 ವರ್ಷದ ಹಿಂದೆ ವಾದಿಯು ದಾವಾ ಸ್ವತ್ತನ್ನು ಗುತ್ತಮ್ಮನಿಂದ ಖರೀದಿ ಮಾಡಿರುತ್ತಾರೆ. ನನಗೆ ಇಸವಿ ಮತ್ತು ದಿನಾಂಕ ನೆನಪಿಲ್ಲ. ದಾವೆಯು ವಾದಿಯ ಮೇಲೆ ಹಾಕಲಾಗಿರುತ್ತದೆ. ನಾನು ದಾವಾ ಸ್ವತ್ತಿಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ದಾವಾ ಸ್ವತ್ತಿನ ಸರ್ವೇ ನಂ. 45 ನನ್ನ ಜಮೀನಿನ ಸರ್ವೇ ನಂ. 38 ಆಗಿರುತ್ತದೆ. ನಮ್ಮ ಜಮೀನಿಂದ 3 ನೇ ಪಟ್ಟೆ ವಾದಿಯರದ್ದಾಗಿರುತ್ತದೆ. 1938 ರಲ್ಲಿ ನಮ್ಮ ಜಮೀನನ್ನು ನಮ್ಮ ತಂದೆಯವರು ಖರೀದಿ ಮಾಡಿರುತ್ತಾರೆ. ದಾವಾ ಸ್ವತ್ತು ಮೂಲತಃ ಯಾರಿಗೆ ಸೇರಿರುತ್ತದೆ ಎಂದು ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಅದು ವಾದಿಯವರಿಗೆ ಸೇರಿರುತ್ತದೆ . ಗುತ್ತಮ್ಮ ರವರಿಂದ ವಾದಿಯು ದಾವಾ ಸ್ವತ್ತನ್ನು ಖರೀದಿಸಲಾಗಿದೆ ಎನ್ನುವ ಕಾಲಕ್ಕೆ ಗುತ್ತಮ್ಮನ ಹೆಸರಿನಲ್ಲಿ ಪಹಣಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ವಾದಿಯು ನಿಮ್ಮ ಸಂಬಂಧಿಕರು ಎಂದರ ದೂರದ ಸಂಬಂಧಿಯಾಗಿರುತ್ತಾರೆ. ನನಗೆ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ವಾದಿಯು ನಮ್ಮ ಸಂಬಂಧಿಕರು ಎನ್ನುವ ಕಾರಣಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ.42 ಪೂರ್ಣ ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಮೂಲತಃ ದೊಡ್ಡಜ್ಜಿ ಯವರಿಗೆ ಸೇರಿದ ಸ್ವತ್ತಾಗಿದ್ದು ವಾದಿಗಾಗಲಿ, ಗುತ್ತಮ್ಮನಿಗಾಗಲೀ, ನರಸಿಂಹಪ್ಪನಿಗಾಗಲೀ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಬಸಣ್ಣ ನವರ ಜಮೀನು , ದಕ್ಷಿಣಕ್ಕೆ ನನ್ನ ಜಮೀನು. ನನ್ನ ಸ್ವತ್ತಿಗೆ ಹೋಗಬೇಕಾದರೆ ಜಯಣ್ಣನವರ ಸ್ವತ್ತಿನ ಮೂಲಕ ಹೋಗಬೇಕಾಗುತ್ತದೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ದಾವಾ ಸ್ವತ್ತಿನಲ್ಲಿ ಗಿರಿಯಪ್ಪನ ಮಕ್ಕಳೇ ಸ್ವಾದೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಯೇ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದು ನುಡಿದಿರುತ್ತಾರೆ . ಎಲ್ಲ ವಿಚಾರ ಗೊತ್ತಿದ್ದರೂ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.